

ಮತ್ತು ರೂಪಕಗಳು ಅವರ ಸಾಹಿತ್ಯವನ್ನು ಅನನ್ಯಗೊಳಿಸಿದವು. ಉದಾಹರಣೆಗೆ, 'ನೆಲೆ' ಕಾದಂಬರಿಯಲ್ಲಿ ಮುಖ್ಯ ಪಾತ್ರ ಕಾಳಪ್ಪ ಸಾವಿನ ಬಗ್ಗೆ ಯೋಚಿಸುವ ಪರಿ ನೋಡಿ: 'ನಕ್ಷತ್ರ ನೋಡ್ತಾ ನೋಡ್ತಾ ನಾನು ಯಾಕೆ ಹುಟ್ಟಿದೆ, ಹೇಗೆ ಬಂದೆ ಇಲ್ಲಿಗೆ, ಸಾಯುವುದಂತೂ ಖಂಡಿತ ತಾನೇ, ನನ್ನ ಸಾವಿಗೆ ಏನಾದರೂ ಅರ್ಥವುಂಟೆ? ಅನ್ನೂ ಪ್ರಶ್ನೆ ಬಾಧಿಸುತ್ತೆ. ದುಃಖವಲ್ಲ, ಪ್ರಶ್ನೆ. ಈ ನಕ್ಷತ್ರಗಳು ಮಾತ್ರ ನನ್ನ ಹುಟ್ಟು- ಸಾವಿನ ಬಗೆಗೆ ತಮ್ಮ ದಿವ್ಯ ನಿರ್ಲಕ್ಷ್ಯದಿಂದಿವೆ.' ಮತ್ತೊಂದೆಡೆ, 'ವಿದ್ಯುತ್ ಬೆಳಕಿನ ಅಡಚಣೆಯಿಲ್ಲದೆ ನಕ್ಷತ್ರದಡಿ ಒಂಟಿಯಾಗಿ ಮಲಗಿರುವಾಗ ಸ್ವಂತ ಜೀವನದ ಬಗ್ಗೆಯೂ ಆಲೋಚನೆ ಸರಾಗವಾಗಿ ಹರಿಯುತ್ತೆ. ಆಗ ಒಂದು ಥರಾ ಸಂತೋಷವೂ ಇರುತ್ತೆ.' ಒಂಟಿ ಮನುಷ್ಯನನ್ನು ಕಾಡುವ ಬದುಕಿನ ಮತ್ತು ಸಾವಿನ ಪ್ರಶ್ನೆಗಳು ತತ್ತ್ವಶಾಸ್ತ್ರೀಯವೂ ಆಗಿ ಭಾವರಸಗಳ ಸಾಹಿತ್ಯವೂ ಆಗುವುದು ಹೀಗೆ.

ಅವರ 'ಜಲಪಾತ' ಕಾದಂಬರಿಯು ಇದೇ ಬಗೆಯಲ್ಲಿ ತತ್ತ್ವ ಮತ್ತು ಕಲೆಗಳ ಸಂಗಮವಾಗುತ್ತದೆ. ಭೈರಪ್ಪನವರ ಕಾದಂಬರಿಗಳಲ್ಲೇ ನನ್ನ ಅಚ್ಚುಮೆಚ್ಚಿನದು ಅದು. ಜೀವಸೃಷ್ಟಿಯನ್ನು ಒಬ್ಬ ಕಲಾವಿದ ಮತ್ತು ಒಬ್ಬ ವಿಜ್ಞಾನಿಯು ನೋಡುವ ಪರಿಯಲ್ಲಿನ ವೈರುಧ್ಯವನ್ನು ಈ ಕಾದಂಬರಿಯು ಕಲೆಯ ರೂಪದಲ್ಲಿ ಹಿಡಿದುಕೊಡುತ್ತದೆ. ಕಲೆಯ ಮತ್ತು ಮಾನವೀಯತೆಯ ಸ್ಪರ್ಶವಿಲ್ಲದ ತತ್ತ್ವ ಮತ್ತು ಸಿದ್ಧಾಂತಗಳು ಹೇಗೆ ಶುಷ್ಕವಾಗಬಲ್ಲವು ಎನ್ನುವುದನ್ನು ನಿರೂಪಿಸುವ ಕಾದಂಬರಿಯದು. ಅದರ ಕಲಾವಿದ ಮುಖ್ಯಪಾತ್ರವು ಹೇಳುವ ಮಾತು 'ಉತ್ಪಾದನೆಯು ಸೃಷ್ಟಿಯಲ್ಲ. ಸೃಷ್ಟಿಯಲ್ಲಿ ಜೀವವಿದೆ. ನವಮೌಲ್ಯವಿದೆ' ಎನ್ನುವುದು ಇಂದಿನ ಚಾಟ್ ಜಿಪಿಟಿ ಕಲಾವಿದರನ್ನು ಉದ್ದೇಶಿಸಿಯೇ ಬರೆದಿದ್ದರೇನೊ ಅನ್ನುವಂತಿದೆ.

ತತ್ತ್ವಶಾಸ್ತ್ರವು ಗುರುಗ್ರಹವಿದ್ದಂತೆ. ಅದಕ್ಕೊಂದು ಭಯಂಕರ ಗುರುತ್ವಾಕರ್ಷಣೆಯಿದೆ. ತಂತಿನಡಿಗೆಯಲ್ಲಿ ಕೊಂಚ ಅಲುಗಿದರೂ ಅದು ತನ್ನೆಡೆಗೆ ಬೀಳಿಸಿಕೊಳ್ಳುತ್ತದೆ ಮತ್ತು ಕಲೆಯೊಂದಿಗಿನ ಸಮತೋಲನವನ್ನು ಅಸಮಗೊಳಿಸುತ್ತದೆ. ಭೈರಪ್ಪನವರ ಕೆಲವು ಕಾದಂಬರಿಗಳು ಹೆಚ್ಚು ತತ್ತ್ವಜಿಜ್ಞಾಸೆಯೆಡೆಗೆ ವಾಲಿದಾಗ ಜಲಪಾತದ ಸಮತೋಲನವನ್ನು ನನ್ನೊಳಗಿನ ಓದುಗ ಮತ್ತೆಮತ್ತೆ ಬಯಸಿದ್ದು ಸತ್ಯ.

'ಪರ್ವ' ಒಂದು ಅಸಾಧಾರಣ ಪ್ರಯೋಗ. ಭೈರಪ್ಪನವರು ತಮ್ಮ ಮಾತು ಮತ್ತು ಬರಹಗಳಲ್ಲಿ ಅನೇಕ ಬಾರಿ ತಾವು 'ಪರ್ವ'ವನ್ನು ಬರೆದ ಬಗೆಯನ್ನು ಮತ್ತು ಅದಕ್ಕೆ ಪೂರಕವಾಗಿ ಮಾಡಿದ ಪಯಣ ಮತ್ತು ಇತರ ಸಿದ್ಧತೆಗಳನ್ನು, ಉತ್ತರಭಾರತದ ಜನಜೀವನ ಅವಲೋಕನಗಳನ್ನು ನಿರೂಪಿಸುತ್ತಿದ್ದರಾದರೂ, 'ಪರ್ವ'ದ ಅತಿದೊಡ್ಡ ಸಾಹಿತ್ಯಿಕ ಮೌಲ್ಯವೆಂದರೆ, ಪಾತ್ರಗಳ ಅಂತಃಕರಣ ಮತ್ತು ಅವು ಸಂಪೂರ್ಣವಾಗಿ ಮನುಷ್ಯ ಭಾವಲೋಕದಲ್ಲಿ ಮಿಳಿತವಾಗುವ ಬಗೆ. ಸಾಹಿತ್ಯಿಕವಾಗಿ ಇದರ ಮೌಲ್ಯವನ್ನು ಇನ್ನೊಂದು ಬಗೆಯಲ್ಲಿ ಹೇಳಬಹುದು. ಪಠ್ಯಗಳು ಕಾಲಾಂತರದಲ್ಲಿ ಒಂದಕ್ಕೊಂದು ಸಂಭಾಷಿಸುತ್ತವಂತೆ. ಇದನ್ನು ಇಂಟರ್‌ಟೆಕ್ಸ್ಚುವಾಲಿಟಿ (ಅಂತರಪಠ್ಯತೆ) ಎನ್ನುವುದುಂಟು. ಇದು ಮಹಾಭಾರತಕ್ಕೆ ಸಿಕ್ಕ ಬಗೆಯಲ್ಲಿ ಪ್ರಪಂಚದಲ್ಲಿ ಮತ್ತೆ ಯಾವ ಪಠ್ಯಕ್ಕೂ ಸಿಕ್ಕಿಲ್ಲ. ಮಹಾಭಾರತದಂತಹ ಅತಿಪ್ರಾಚೀನ